# ಕೊಕ್ಕೊ ಕೇರ್ ಕಾರ್ಡ್ (ಕೀಟ)

## ಹಿಟ್ಟುತಿಗಣೆ





- ➢ ಹಿಟ್ಟು ತಿಗಣೆಯು ಬೇಸಿಗೆ ಕಾಲದಲ್ಲಿ ಕೊಕ್ಕೊವಿನ ಚಿಗುರೆಲೆಗಳಿಂದ, ರೆಂಬೆ ಕೊಂಬೆಗಳಿಂದ ಹೂ ಗೊಂಚಲುಗಳಿಂದ ಮತ್ತು ಕಾಯಿಗಳಿಂದ ರಸವನ್ನು ಹೀರುತ್ತವೆ.
- ➢ ಚಿಗುರೆಲೆಗಳು ಮುರುಟಿದಂತಾಗಿ ಹೂ, ಮಿಡಿ ಹಾಗೂ ಎಳೆಯ ಕಾಯಿಗಳ ಬೆಳವಣಿಗೆಯು ಕುಂಠಿತಗೊಳ್ಳುತ್ತದೆ.
- ✓ ಜೈವಿಕ ಕೀಟಗಳನ್ನು ಕೊಕ್ಕೊ ತೋಟಗಳಲ್ಲಿ ಪೋಷಿಸುವುದರಿಂದ ಹಿಟ್ಟು ತಿಗಣೆ ಬಾಧೆಯನ್ನು ನಿಯಂತ್ರಣದಲ್ಲಿಡಬಹುದು.
- ✓ ಈ ಕೀಟಗಳ ಹಾವಳಿ ಹೆಚ್ಚಾಗಿದ್ದಲ್ಲಿ, ಶೇಕಡಾ 0.5ರ ಬೇವಿನ ಎಣ್ಣೆ ಮತ್ತು ಶೇಕಡಾ 5ರ ಸೋಪ್ ದ್ರಾವಣದ ಮಿಶ್ರಣವನ್ನು 15 ದಿನಗಳ ಅಂತರದಲ್ಲಿ ಎರಡು ಬಾರಿ ಸಿಂಪಡಿಸಬೇಕು.

## ಟೀ ಸೊಳ್ಳೆ





- ➢ ಕೀಟದ ಬಾಧೆಯು ಅಕ್ಟೋಬರ್ ತಿಂಗಳಲ್ಲಿ ಗಿಡ ಸವರುವಿಕೆಯ ನಂತರ ಚಿಗುರುವ ಎಲೆಗಳಲ್ಲಿ, ಸಣ್ಣ ಮಿಡಿ ಹಾಗೂ ಕಾಯಿಗಳಲ್ಲಿ, ಕಂದು ಬಣ್ಣದ ಚುಕ್ಕೆಯಾಗಿ ಕಂಡು ಬರುತ್ತದೆ.
- ➢ ಕೀಟವು ರಸ ಹೀರಿದ ಜಾಗಗಳಲ್ಲಿ ಕಂದು ಬಣ್ಣದ ವೃತ್ತಾಕಾರದ ಚುಕ್ಕೆಗಳು ಕಂಡು ಬಂದು ಕ್ರಮೇಣ ಕಪ್ಪು ಬಣ್ಣಕ್ಕೆ ತಿರುಗುತ್ತವೆ.
- ➢ ಕಾಯಿಯ ಮೇಲೆ ಕಂಡು ಬರುವ ಕಪ್ಪು ಚುಕ್ಕೆಯು ವೃತ್ತಾಕಾರದ ರೂಪವನ್ನು ತಾಳುತ್ತದೆ.
- ✓ ನೆರಳನ್ನು ನಿಯಂತ್ರಣದಲ್ಲಿಡಲು ಅನಾವಶ್ಯಕವಾದ ರೆಂಬೆ ಕೊಂಬೆಗಳನ್ನು ಕತ್ತರಿಸಿ ಸೂರ್ಯನ ಬೆಳಕು ಬೀಳುವಂತೆ ಮಾಡಬೇಕು.
- ✓ ಪರ್ಯಾಯ ಗಿಡಗಳಾದ ಬೇವು, ಗೇರು ಹಾಗೂ ಸೀಬೆ ಮರಗಳನ್ನು ಕೊಕ್ಕೊ ತೋಟದ ಸುತ್ತ ಮುತ್ತಲಿನ ಪ್ರದೇಶದಿಂದ ತೆಗೆಯಬೇಕು.
- ✓ ಕೀಟದ ಬಾಧೆಯು ಕಡಿಮೆ ಇದ್ದಲ್ಲಿ ಶೇಕಡಾ 3 ಬೇವಿನ ಎಣ್ಣೆ ಮಿಶ್ರಣ ಅಥವಾ ಬ್ಯೂವೇರಿಯಾ ಬಾಸ್ಸಿಯಾನಾ (4 ಗ್ರಾಂ/ಲೀಟರ್) ಸಿಂಪಡಿಸಬೇಕು.
- ✓ ಕೀಟದ ಬಾಧೆಯು ಹೆಚ್ಚಿದಲ್ಲಿ, ಬೆಳಗ್ಗಿನ ಹೊತ್ತಿನಲ್ಲಿ ಲ್ಯಾಮಡಾಸೈಹೆಲೋಥ್ರಿನ್ (0.003%) (0.3 ಎಮ್.ಎಲ್./ಲೀಟರ್) ಕೀಟನಾಶಕವನ್ನು ಸಿಂಪಡಿಸ ಬೇಕು.
- ✓ ಕೀಟನಾಶಕವನ್ನು ಗಿಡವು ಚಿಗುರುವಾಗ, ಹೂವು ಮತ್ತು ಹಣ್ಣು ಬಿಡುವಾಗ ಸಿಂಪಡಿಸಬೇಕು.

## ಸಸ್ಯ ಹೇನು





- ➢ ಸಸ್ಯ ಹೇನುಗಳು ಚಿಗುರೆಲೆಗಳ ಕೆಳಭಾಗ, ಮೃದುವಾದ ಕಾಂಡ, ಮೊಗ್ಗು ಮತ್ತು ಎಳೆಯ ಕಾಯಿಗಳಲ್ಲಿ ಗುಂಪು ಗುಂಪಾಗಿ ಕಂಡು ಬರುತ್ತವೆ.
- ➢ ಸಸ್ಯ ಹೇನಿನ ಬಾಧೆಗೆ ಒಳಗಾದ ಹೂವು ಮತ್ತು ಎಳೆಯ ಕಾಯಿಗಳು ಉದುರಿ ಹೋಗುತ್ತವೆ ಹಾಗೂ ಎಲೆಗಳು ಮುದುಡಿದಂತಾಗುತ್ತದೆ.
- ✓ ಸಸ್ಯ ಹೇನಿನ ನಿಯಂತ್ರಣಕ್ಕಾಗಿ ಶೇಕಡಾ 0.5 ಬೇವಿನ ಎಣ್ಣೆಯ ಮಿಶ್ರಣ (ಒಂದು ಲೀಟರ್ ನೀರಿಗೆ 5 ಮಿ.ಲೀ.)ವನ್ನು ಕೀಟಗಳ ಗುಂಪಿಗೆ ಸಿಂಪಡಿಸಬೇಕು.
- ✓ ಕೊಕ್ಕೊ ಮರಗಳಲ್ಲಿ ಪರಭಕ್ಷಕ ಹಾಗೂ ಪರಾವಲಂಬಿ ಕೀಟಗಳನ್ನು ಪೋಷಿಸುವುದರಿಂದಲೂ ಸಸ್ಯ ಹೇನನ್ನು ದೂರವಿಡಬಹುದು.
- ✓ ಹಲವಾರು ಕೀಟಗಳು ಪ್ರಾಕೃತಿಕವಾಗಿ ಸಸ್ಯ ಹೇನುಗಳನ್ನು ನಿಯಂತ್ರಣದಲ್ಲಿಡುವುದರಿಂದ ಕೊಕ್ಕೊ ಬೆಳೆಗೆ ಈ ಕೀಟದ ಬಾಧೆಯು ಕಡಿಮೆಯಾಗಿರುವುದು.
- ✓ ಇರುವೆಗಳನ್ನು ನಿಯಂತ್ರಣದಲ್ಲಿಡಬೇಕು.

## ಕಾಂಡ ಕೊರೆಯುವ ಹುಳಗಳು





- ➢ ಈ ದುಂಬಿಯ ಮರಿ ಹುಳಗಳು ಕಾಂಡದ ತೊಗಟೆಯಲ್ಲಿ ಮೊದಲು ಕಾಣಿಸಿಕೊಂಡು ನಂತರ ಕ್ರಮೇಣವಾಗಿ ಒಳಭಾಗಕ್ಕೆ ಸುರಂಗ ಮಾಡಿ ಸೇರಿಕೊಳ್ಳುತ್ತವೆ.
- ➢ ಎಳೆಯ ಗಿಡಗಳಲ್ಲಿ ಈ ಕೀಟದ ಬಾಧೆಯು ಕವಲು ಒಡೆಯುವ ಭಾಗದಲ್ಲಿ ಕಂಡು ಬರುವುದು ಹಾಗೂ ಈ ಭಾಗವು ಒಣಗಿ ತುಂಡಾಗುತ್ತದೆ.
- ➢ ಬೆಳೆದ ಮರಗಳಲ್ಲಿ ಈ ಕೀಟದ ಬಾಧೆಯು ಮರದ ಕಾಂಡದಲ್ಲಿ ಕಾಣಿಸಿಕೊಳ್ಳುವುದು. ಇದರಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ನಂತರ ಕಂದು ಬಣ್ಣಕ್ಕೆ ತಿರುಗುವುದು. ನಂತರ ಈ ಕೀಟದ ಬಾಧೆಯು ಮುಂದುವರೆದಂತೆ ಬಾಧಿತ ಗಿಡವು ಸಾಯುವುದು.
- ➢ ಕೊಕ್ಕೊ ತೋಟವನ್ನು ಕಾಡು ಮರಗಳನ್ನು ಕಡಿದ ಪ್ರದೇಶದಲ್ಲಿ ಅಥವಾ ಕಾಡು ಪ್ರದೇಶ ಸನಿಹವಿರುವ ಜಾಗ ದಲ್ಲಿ ಬೆಳೆದರೆ ಈ ಹುಳುಗಳ ಹಾವಳಿ ತೀವ್ರವಿರುತ್ತದೆ.
- ✓ ಈ ಕೀಟವನ್ನು ಬಾಧೆಗೊಳಗಾದ ಮರದಿಂದ ತೆಗೆದು ನಾಶಪಡಿಸಬೇಕು.
- ✓ ಕೀಟ ಬಾಧಿತ ಕಾಂಡದ ಭಾಗಕ್ಕೆ ಹತ್ತಿಯನ್ನು ಕ್ಲೋರೊಫಾರ್ಮ್, ಫಾರ್ಮಾಲಿನ್ ಅಥವಾ ಪೆಟ್ರೋಲ್ ನಲ್ಲಿ ಅದ್ದಿ ಕೀಟ ಬಾಧಿತ ಸ್ಥಳದಲ್ಲಿ ಇಟ್ಟು ಮೇಲ್ಭಾಗಕ್ಕೆ ಮಣ್ಣನ್ನು ಲೇಪಿಸಬೇಕು.
- ✓ ಕ್ಲೋರೋಪೈರಿಫೋಸ್ ಶೇಕಡಾ 0.05%ನ್ನು ಹತ್ತಿಯಲ್ಲಿ ಅದ್ದಿ ಕೀಟ ಬಾಧಿತ ಭಾಗಕ್ಕೆ ಕಟ್ಟಬೇಕು.
- ✓ ತೋಟದ ಸ್ವಚ್ಛತೆಯನ್ನು ಕಾಪಾಡಬೇಕು.
- ✓ ಅತೀ ಹೆಚ್ಚು ಹಾನಿಗೊಳಗಾದ ಭಾಗವನ್ನು ತೆಗೆಯಬೇಕು.
- ✓ ಅತೀ ಹೆಚ್ಚು ಕಸ ಕಡ್ಡಿ ತ್ಯಾಜ್ಯಗಳನ್ನು ಹಾಗೂ ಸವರುವಿಕೆಯಲ್ಲಿ ದೊರೆತ ಕವಲುಗಳನ್ನು ಬುಡಕ್ಕೆ ಹಾಕಬಾರದು.


# ಕೊಕ್ಕೊ ಕೇರ್ ಕಾರ್ಡ್ (ಕೀಟ)

## ಕೊಕ್ಕೊ ಕಾಯಿ ಕೊರೆಯುವ ಹುಳ



- ➢ ಮೊಟ್ಟೆಯಿಂದ ಹೊರ ಬಂದ ಹುಳಗಳು ಸಣ್ಣ ರಂಧ್ರವನ್ನು ಮಾಡಿ ಕೊಕ್ಕೊ ಕಾಯಿಗಳ ಒಳ ಪ್ರವೇಶಿಸಿ, ಮೃದುವಾದ ಅಂಗಾಂಶವನ್ನು ತಿಂದು ನಾಶ ಮಾಡುತ್ತದೆ.
- ➢ ಕೀಟದ ಬಾಧೆಯು ಹೆಚ್ಚಾಗಿ ಒಂದಕ್ಕೊಂದು ಅಂಟಿಕೊಂಡಿರುವ ಕಾಯಿಗಳಲ್ಲಿ ಮತ್ತು ಮರಕ್ಕೆ ಅಂಟಿಕೊಂಡಿರುವ ಕಾಯಿಗಳಲ್ಲಿ ಕಂಡುಬರುತ್ತವೆ.
- ✓ ಕೀಟ ಬಾಧಿತ ಹಣ್ಣುಗಳನ್ನು ಮರದಿಂದ ಬೇರ್ಪಡಿಸಿ ನಾಶಪಡಿಸಬೇಕು.
- ✓ ಕ್ಯಾಸ್ಟರ್/ಹರಳು ಬೆಳೆಯನ್ನು ತೋಟದ ಬದಿಯಲ್ಲಿ ಬೆಳೆಸುವುದರಿಂದ ಈ ಕೀಟಗಳನ್ನು ನಿಯಂತ್ರಣದಲ್ಲಿಡ ಬಹುದು.

## ಎಲೆ ತಿನ್ನುವ ಹುಳಗಳು



- ➢ ಎಳೆ ಗಿಡಗಳ ಎಲೆಗಳ ಮೇಲೆ ಈ ಹುಳುಗಳ ಹಾವಳಿ ಹೆಚ್ಚಾಗಿರುತ್ತದೆ.
- ➢ ಈ ಹುಳುಗಳ ಸಂಖ್ಯೆಯು ತೀವ್ರವಾದಂತೆ ಎಲೆಗಳನ್ನು ತಿಂದು ಹಾಗೂ ಎಳೆ ಕಾಯಿಗಳ ಸಿಪ್ಪೆಯನ್ನು ಹಗಲು ಮತ್ತು ರಾತ್ರಿ ಹೇರಳವಾಗಿ ತಿನ್ನುತ್ತವೆ.
- ➢ ಈ ಹುಳಗಳ ಸಂಖ್ಯೆಯು ಮುಂಗಾರು ಮಳೆಯ ನಂತರ ಹೆಚ್ಚಾಗಿರುತ್ತದೆ.
- ✓ ಹುಳದ ಬಾಧೆಯು ಹೆಚ್ಚಾಗಿದ್ದಲ್ಲಿ ಶೇಕಡಾ 0.5 ರಷ್ಟು ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು.

## ಇಲಿ



- ➢ ಇಲಿಗಳು ಕೊಕ್ಕೊ ಕಾಯಿಯ ತೊಟ್ಟಿನ ಸಮೀಪ ಕೊರೆದು ತಿನ್ನುತ್ತವೆ.
- ➢ ಬಲಿತ ಮತ್ತು ಎಳೆಯ ಕೊಕ್ಕೊ ಕಾಯಿಗಳು ಇಲಿಗಳಿಂದ ಹಾನಿಗೊಳಗಾಗುತ್ತವೆ.
- ✓ 10 ಗ್ರಾಂ ಬ್ರೋಮೋಡಿಯೋಲೋನ್ ಮೇಣದ ಬಿಲ್ಲೆಗಳನ್ನು 10 ರಿಂದ 12 ದಿನಗಳ ಅಂತರದಲ್ಲಿ ಎರಡು ಬಾರಿ ಕೊಕ್ಕೊ ಮರಗಳ ರೆಂಬೆಗಳಲ್ಲಿ ಇಡಬೇಕು.
- ✓ ಹುರಿದ ತೆಂಗಿನ ಕಾಯಿ ಹೋಳುಗಳನ್ನು ಬೋನಿನಲ್ಲಿಟ್ಟು ಇಲಿಯನ್ನು ನಾಶಪಡಿಸಬಹುದು.

## ಅಳಿಲು



- ➢ ಅಳಿಲುಗಳು ಚೆನ್ನಾಗಿ ಬಲಿತ ಮತ್ತು ಹಣ್ಣಾದ ಕಾಯಿಗಳನ್ನು ಮಾತ್ರ ಕಾಯಿಯ ಮಧ್ಯಭಾಗದಲ್ಲಿ ಘಾಸಿಗೊಳಿಸಿ ತಿನ್ನುತ್ತವೆ.
- ✓ ಮರದ ಅಥವಾ ತಂತಿಯ ಬೋನುಗಳಲ್ಲಿ ತೆಂಗಿನ ಕಾಯಿಯ ಹೋಳುಗಳನ್ನು ಕೊಕ್ಕೊ ಗಿಡಗಳ ಮೇಲಿಟ್ಟು ಅಳಿಲುಗಳನ್ನು ಆಕರ್ಷಿಸಿ ಹಿಡಿಯಬಹುದು.
- ✓ ಈ ಕೆಲಸವನ್ನು ಬೆಳೆ ಕಡಿಮೆ ಇರುವ ಕಾಲ (ಅಕ್ಟೋಬರ್ – ನವೆಂಬರ್) ಮತ್ತು ಪರ್ಯಾಯ ಬೆಳೆಗಳಾದ ಭತ್ತ, ಗೇರುಹಣ್ಣು ಮತ್ತು ಹಲಸಿನಹಣ್ಣು ಸಿಗದ ಕಾಲದಲ್ಲಿ ಕೈಗೊಳ್ಳಬೇಕು.
- ✓ ಕೊಕ್ಕೊ ಕಾಯಿಗಳನ್ನು ಸರಿಯಾದ ಸಮಯಕ್ಕೆ ಕೊಯ್ಯುವುದರಿಂದ ಮತ್ತು ಅನಗತ್ಯವಾಗಿ ಮರಗಳ ಸಾಂಧ್ರತೆಯನ್ನು ಹೆಚ್ಚಿಸದೆ ಇರುವುದರಿಂದ ಅಳಿಲುಗಳ ಉಪಟಳವನ್ನು ತಡೆಯಬಹುದು.

ವಿಸ್ತರಣೆ ಮಡಿಚೋಲೆ ಸಂಖ್ಯೆ: 293

ಲೇಖಕರು: ಡಾ. ಎಸ್. ಎಲೈನ್ ಅಪ್ಶರ, ಡಾ. ಶಿವಾಜಿ ಹೌಸರಾವ್ ತುಬೆ ಮತ್ತು ಡಾ. ಎಂ. ಚೈತ್ರ

ಭಾ.ಕೃ.ಅನು.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕ್ಷೇತ್ರೀಯ ಕೇಂದ್ರ, ವಿಟ್ಲ, ಕರ್ನಾಟಕ– 574 243

ದೂರವಾಣಿ ಸಂಖ್ಯೆ: 08255– 239238, Email: cpcrivtl@gmail.com

ಮಾರ್ಚ್, 2021

ಭಾಕೃಅನುಪ ICAR

ಪ್ರಕಾಶಕರು : ನಿರ್ದೇಶಕರು, ಭಾ.ಕೃ.ಅನು.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು, ಕೇರಳ– 671 124

ಪ್ರಾಯೋಜಕರು : ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿ, ಕೇರಳ– 682 011

के रो फ अ सं CPCRI